**ಒಎಸ್. 339.2015**

**ಡಿ. ಡಬ್ಲ್ಯೂ 1-**

**ದಿನಾಂಕಃ 12.06.2025 ರಂದು** ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಎಸ್.ಕೆ. ಆರ್ ವಕೀಲರಿಂದಃ-

ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ ನಿಮ್ಮ ಸ್ವತ್ತು ಇದೆ ಎಂದರೆ ಸರಿಯಲ್ಲ. ವಾದಿಯು ಈ ದಾವೆಯನ್ನು ಹಾಕುವ ಪೂರ್ವದಲ್ಲಿ ನಿಮ್ಮ ವಿರುದ್ಧ ದೂರನ್ನು ಸಹ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ದೂರಿನ ಅನ್ವಯ ವಿಚಾರಣೆ ಸಲುವಾಗಿ ನೀವು 3 ನೇ ಅಧಿಕ ನ್ಯಾಯಾಲಯಕ್ಕೂ ಸಹ ಬರುತ್ತಿದ್ದೀರಿ ಎಂದರೆ ಸರಿ . ಕ್ರೈ ನಂ. 1/2016 ರಡಿಯಲ್ಲಿ ಅಪರಾಧ ಮಾಡಿರುತ್ತೀರಿ ಎಂದು ಹೇಳಿ ನಿಮ್ಮ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಲಾಗಿದೆ ಎಂದರೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನಿಮ್ಮ ಮತ್ತು ನಿಮ್ಮ ಮಕ್ಕಳ ವಿರುದ್ಧ ದೂರು ದಾಖಲಾಗಿರುತ್ತದೆ ಎಂದರೆ ಸರಿ . ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನೀವು ವಾದಿಗೆ ತೊಂದರೆ ಕೊಟ್ಟ ಸಲುವಾಗಿ ವಾದಿಯು ನಿಮ್ಮ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ , ಅದು ಈಗ ಸಹ ಚಾಲ್ತಿಯಲ್ಲಿದೆ ಎಂದರೆ ನಾವು ತೊಂದರೆ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ.

ನೀವು ನಿಮ್ಮ ತಕರಾರು ಪತ್ರದಲ್ಲಿ ದಾವಾ ಸ್ವತ್ತಿನ ಉತ್ತರಕ್ಕೆ ನಿಮ್ಮ ಸ್ವತ್ತು ಇದೆ ಎಂದು ಬರೆಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಾನು ಬರೆಸಿರುವುದಿಲ್ಲ, ವಾದಿಯೇ ಬರೆಸಿರುತ್ತಾರೆ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ನಾನು ತಕರಾರು ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ತಕರಾರು ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತಿನ ಉತ್ತರಕ್ಕೆ ನಿಮ್ಮ ಸ್ವತ್ತು ಇದೆ ಎಂದು ಬರೆಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ದಾವಾ ಸ್ವತ್ತನ್ನು ಮಾದೇಗೌಡರಿಂದ ಖರೀದಿ ಮಾಡಿರುತ್ತೇನೆ. ಸದರಿ ಸ್ವತ್ತಿನ ಖಾನೇಷುಮಾರಿ ನಂಬರ್ ಗೊತ್ತಿರುವುದಿಲ್ಲ.

ಸದರಿ ಸ್ವತ್ತು ಪೂರ್ವ ಪಶ್ಚಿಮ 24 ಅಡಿ , ಉತ್ತರ ದಕ್ಷಿಣ 79.5 ಅಡಿ ಇರುತ್ತದೆ. ಸದರಿ ವಿಷಯವನ್ನು ನನ್ನ ತಕರಾರು ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ ನನಗೆ ಸೇರಿರುವ 18 ಅಡಿಯ ಹುಲ್ಲು ಹಿತ್ತಲು ಇದೆ ಎಂದರೆ ಸರಿ . ಸದರಿ ಅಷ್ಟು ಜಾಗಕ್ಕೆ ಗ್ರಾಮ ಪಂಚಾಯಿತಿಯಲ್ಲಿ ನನ್ನ ಹೆಸರಿಗೆ

ಖಾತೆ ಆಗಿದೆ . ನನ್ನ ಹೆಸರಿಗೆ ಖಾತೆ ಆಗಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ದಾವಾ ಸ್ವತ್ತಿನ ಖಾನೇಷುಮಾರಿ ನಂಬರ್ ಗೊತ್ತಿಲ್ಲ. ದಾವಾ ಸ್ವತ್ತು ನಿಮ್ಮ ಅಣ್ಣನ ಸ್ವಯಾರ್ಜಿತ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ, 18 ಅಡಿ ನನಗೆ ಸೇರಿದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ನನಗೂ ಸೇರಿದೆ ಎಂದು ಹೇಳಿ ನಾನು ನಮ್ಮ ಅಣ್ಣನ ವಿರುದ್ಧ ದಾವೆ ಹಾಕಿರುತ್ತೇನೆ. ನಿಪಿ-3 ಮತ್ತು 4 ರಲ್ಲಿರು ವ್ಯಕ್ತಿ ನನ್ನ ಅಣ್ಣ ಆಗಿರುತ್ತಾರೆ.

ದಾವಾ ಸ್ವತ್ತಿನ ಖಾನೇಷುಮಾರಿ ನಂಬರ್ 28/24/2, ಪೂರ್ವ ಪಶ್ಚಿಮ 14 ಗಜ , ಉತ್ತರ ದಕ್ಷಿಣ 15 ಗಜ ನಿಮ್ಮ ಅಣ್ಣನಿಗೆ ಸೇರಿದ್ದು ಎಂದರೆ ಸರಿಯಲ್ಲ, ಸಾಕ್ಷಿದಾರರು ನನಗೂ ಮತ್ತು ನನ್ನ ಅಣ್ಣ ನಿಗೆ ಇಬ್ಬರಿಗೂ ಸೇರಿದ್ದು ಎಂದು ನುಡಿಯುತ್ತಾರೆ. ಆ ರೀತಿ ಇಬ್ಬರಿಗೂ ಸೇರಿದ್ದು ಎಂದು ಹೇಳಿ ನಾನು ಭಾಗ ಕೇಳಿ ಕೇಸ್ ಹಾಕಿರುವುದಿಲ್ಲ. ನಾನು ದಾವಾ ಸ್ವತ್ತನ್ನು ಮಾದೇಗೌಡನಿಂದ ಕೊಂಡು ಕೊಂಡಿರುತ್ತೇನೆ. ಸದರಿ ಸ್ವತ್ತನ್ನು ಮಾದೇಗೌಡನಿಂದ ಕೊಂಡು ಕೊಂಡಿರುವ ಸಂಬಂಧ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನಾನು ಸುಳ್ಳು ಹೇಳುತ್ತಿದ್ದೇನೆ , ಸದರಿ ದಾವಾ ಸ್ವತ್ತನ್ನು ನನ್ನ ಅಣ್ಣನವರು 27.12.1973 ರಲ್ಲಿ ನಿಂಗೇಗೌಡನ ಮಗ ಉರುಫ್ ಕುನ್ನೀರೇಗೌಡ ರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ವಾದಿಗೆ ತೊಂದರೆ ಕೊಟ್ಟ ಕಾರಣ ವಾದಿ ದಾವೆಯನ್ನು ಸಲ್ಲಿಸಿರುತ್ತಾರೆ, ನ್ಯಾಯಾಲಯವು ನಿಮ್ಮ ವಿರುದ್ಧ ಶಾಶ್ವತ ಪ್ರತಿಬಂಧಕಾಜ್ಞೆಯನ್ನು ಹೊರಡಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಪ್ರತಿಬಂಧಕಾಜ್ಞೆ ಇದ್ದರೂ ಸಹಿತ ನೀವು ಅದನ್ನು ಉಲ್ಲಂಘನೆ ಮಾಡಿದ ಕಾರಣ ನಿಮ್ಮ ವಿರುದ್ಧ ನ್ಯಾಯಾಲಯ ವಿಚಾರಣೆಗೆ ಆದೇಶ ಮಾಡಿರುತ್ತದೆ ಎಂದರೆ ಗೊತ್ತಿಲ್ಲ.

ಸದರಿ ವಿಚಾರಣೆ ಆಗುವಾಗ ವಕೀಲರನ್ನು ನೇಮಕ ಮಾಡಿರುತ್ತೀರಿ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ವಿಚಾರಣೆಯ ಪ್ರಕರಣ ಇದೇ ನ್ಯಾಯಾಲಯದಲ್ಲಿ ಇದೆ ಎಂದರೆ ಗೊತ್ತಿಲ್ಲ. ನಿಪಿ-1 ರಲ್ಲಿರುವ ಹಳೆಯ ಮನೆ ನಿಮಗೆ ಸೇರಿದ್ದು ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಕೆಡವಿದಂತಹ ಜಾಗ ನಿಮ್ಮ ಅಣ್ಣನಿಗೆ ಸೇರಿದ್ದು ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಉತ್ತರ ದಿಕ್ಕಿನಲ್ಲಿ ಕಾಣಿಸುತ್ತಿರುವ ಹೆಂಚಿನ ಮನೆ ನಿಮಗೆ ಸೇರಿದ್ದು ಎಂದರೆ ಸರಿ.

**ಒಎಸ್. 339.2015**

**ಡಿ. ಡಬ್ಲ್ಯೂ 1-**

ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ ನಾವು ಕಟ್ಟಡ ಕಾಮಗಾರಿ ಮಾಡುತ್ತಿದ್ದೇವೆ ಎಂದರೆ ಸಾಕ್ಷಿದಾರರು ಮಾಡುತ್ತಿದ್ದೆ , ಈಗ ಬಿಟ್ಟಿರುವುದಾಗಿ ನುಡಿಯುತ್ತಾರೆ. ನಿಪಿ-2 ರಲ್ಲಿರುವ ಸೀಮೆ ಹಂಚಿನ ಮನೆ ವಾದಿಗೆ ಸೇರಿದ್ದು ಎಂದರೆ ಸರಿ. ಸದರಿ ದಾವೆಯಲ್ಲಿ ನ್ಯಾಯಾಲಯವು ನಿಮ್ಮ ವಿರುದ್ಧ ನಿರ್ಬಂಧಕಾಜ್ಞೆ ಹೊರಡಿಸಿದ ನಂತರ ನೀವು ತಂತಿ ಬೇಲಿಯನ್ನು ದಾವಾ ಸ್ವತ್ತಿನಲ್ಲಿ ಹಾಕಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿದಾರರು ನಮ್ಮ ಸ್ವತ್ತಿನಲ್ಲಿ ಹಾಕಿಕೊಂಡಿರುವುದಾಗಿ ನುಡಿಯುತ್ತಾರೆ. ನೀವು ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದ್ದರೂ ಸಹಿತ ಅತಿಕ್ರಮ ಪ್ರವೇಶ ಮಾಡಿ ವಾದಿ ಸ್ವತ್ತಿನಲ್ಲಿ ತಂತಿ ಬೇಲಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ದಾವೆ ಚಾಲ್ತಿಯಲ್ಲಿ ಇರಬೇಕಾದರೆ ತಂತಿ ಬೇಲಿ ಹಾಕಿರುವ ಬಗ್ಗೆ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ವಾದಿಯ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದರಿಂದ, ಮುಂದುವರೆದ ಪಾಟೀಸವಾಲಿಗೆ ಸಮಯವಕಾಶ ನೀಡಿ ಮುಂದೂಡಲಾಯಿತು) .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಕನಕಪುರ.